1	2	3	4	5
13	ಮಂಡ್ಯ	401	–	401
14	ಹಾಸನ	300	300	–
15	ಚಿಕ್ಕಮಗಳೂರು	235	235	–
16	ಕೊಡಗು	65	40	25
17	ದಕ್ಷಿಣ ಕನ್ನಡ	285	195	190
18	ಉಡುಪಿ	45	45	–
19	ಬೆಳಗಾಂ	224	80	144
20	ಚಿಕ್ಕೋಡಿ	630	630	–
21	ಬಿಜಾಪುರ	–	–	–
22	ಬಾಗಲಕೋಟೆ	125	105	20
23	ಧಾರವಾಡ	13	–	13
24	ಗದಗ	25	25	–
25	ಹವೇರಿ	25	185	90
26	ಉತ್ತರ ಕನ್ನಡ	275	275	–
27	ಗುಲಬರ್ಗ	85	85	–
28	ಯಾದಗಿರಿ	340	340	–
29	ಬಳ್ಳಾರಿ	175	125	50
30	ರಾಯಚೂರು	215	215	–
31	ಕೊಪ್ಪಳ	135	135	–
32	ಬೀದರ್	305	305	–
	ಒಟ್ಟು	6555	5000	1555

ಬೆಳಗಾವಿ ಜಿಲ್ಲೆ ತಾಲ್ಲೂಕಿನ ನೇಸರಗಿ ಗ್ರಾಮದ ಸರ್ಕಾರಿ ಪದವಿ ಕಾಲೇಜಿನ ಕಟ್ಟಡ ಕಾಮಗಾರಿ

146 (36) ಶ್ರೀ ಕೌಜಲಗಿ ಮಾಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿಜಿಲ್ಲೆ ತಾಲ್ಲೂಕಿನ ನೇಸರಗಿ ಗ್ರಾಮದ ಸರ್ಕಾರಿ ಪದವಿ ಕಾಲೇಜಿನ ಕಟ್ಟಡ 2002–2003ನೇಸಾಲಿನ ಆಯವ್ಯಯದಲ್ಲಿ ಸೇರದೇ ಇರುವುದರಿಂದ ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ನಿಂತಿರುವ ಕೆಲಸಕ್ಕೆ ಬೇಕಾಗಿರುವ ರೂ 20 00 ಲಕ್ಷಗಳನ್ನು ಈ ಸಾಲಿನ ಆಯವ್ಯಯದಲ್ಲಿ ಸೇರಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) 2003–04ನೇ ಸಾಲಿನ ಆಯವ್ಯಯವು ಪೂರ್ಣಗೊಂಡಿದ್ದು, 2004–05ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನು ಈ ಕಟ್ಟಡವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು

ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸುವುದು

147 (37) ಶ್ರೀ ಕೌಜಲಗಿ ಮಾಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿಯಲ್ಲಿ ಕಳೆದ ವರ್ಷ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸಲಾಗುವುದೇ,

ಆ) ಹಾಗಿದ್ದಲ್ಲಿ, ಈ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಯಾವ ಕ್ರಮಕೈಗೊಳ್ಳಲಾಗಿದೆ

ಇ) ಈ ಸಮ್ಮೇಳನದ ಯಾವ ಯಾವ ನಿರ್ಣಯಗಳನ್ನು ಅನುಷ್ಠಾನಗೊಳಿಸಬೇಕೆಂದು ನಿರ್ಣಯಿಸಲಾಗಿದೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು)

ಅ) ಪರಿಶೀಲಿಸಲಾಗುತ್ತಿದೆ

ಆ) ಉದ್ಭವಿಸುವುದಿಲ್ಲ

ಇ) ಅನುಬಂಧ–1 ರಲ್ಲಿ ಕೊಡಲಾಗಿದೆ

ವಿಧಾನಸಭಾ ಸದಸ್ಯರಾದ ಶ್ರೀ ಕೌಜಲಗಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 37ಕ್ಕೆ ಅನುಬಂಧ

ಕ್ರ ಸಂ	ನಿರ್ಣಯಗಳು	ಕೈಗೊಂಡ ಕ್ರಮಗಳು
1	ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ನೇಮಕಗೊಂಡ ಡಾ ಡಿ ಎಂ ನಂಜುಂಡಪ್ಪ ಸಮಿತಿಯ ವರದಿಯನ್ನು 2003–04ನೇ ವರ್ಷದ ಆಯವ್ಯಯದಲ್ಲಿ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತರಬೇಕೆಂದು ಮಹಾ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ	ಯೋಜನಾ ಇಲಾಖೆಗೆ ಕ್ರಮ ಕೈಗೊಳ್ಳ ಲಾಗಿದೆ
2	ಕರ್ನಾಟಕ ಸಮಗ್ರ ಅಭಿವೃದ್ಧಿಯ ದೃಷ್ಟಿ ಯಿಂದ ಕರ್ನಾಟಕ ರಾಜ್ಯದ ವಿಧಾನಮಂಡಲದ ಅಧಿವೇಶನಗಳು ಪ್ರತಿವರ್ಷ ಉತ್ತರ ಕರ್ನಾಟಕ ಭಾಗದ ಬೆಳಗಾವಿಯಲ್ಲಿ ಜರುಗಬೇಕು	ವಿಧಾನಮಂಡಲಕ್ಕೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
3	ಕೇಂದ್ರ ಸರ್ಕಾರವು ಮಹಾಜನ್ ಆಯೋಗದ ನೇಮಕದಲ್ಲಿ ಸಹಭಾಗಿಯಾಗಿದ್ದುದರಿಂದ ಅದು ತನ್ನ ಮೇಲಿನ ನೈತಿಕ ಹೊಣೆಯನ್ನು ಅನುಲಕ್ಷಿಸಿ ಮಹಾಜನ್ ವರದಿಯನ್ನು	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಕ್ರಮ ಕೈಗೊಳ್ಳಲು ಕೋರಿದ